

ಶ್ರದ್ಧಾ ಶ್ರೀನಾಥ್



ಇದೆಯೇ? ಈ ನಿಟ್ಟಿನಲ್ಲಿ ಪಿ.ಎಚ್. ವಿಶ್ವನಾಥ್ ಗುರ್ತಿಸುವುದು ಕಿರುತೆರೆಯನ್ನು. 'ಈಗ ಟೀವಿಯ ಕಾರಣದಿಂದಾಗಿ ನಟನೆ ಮತ್ತು ಹೆಣ್ಣುಮಕ್ಕಳ ನಡುವೆಯಿದ್ದ ದೊಡ್ಡದೊಂದು ಅಂತರ ಇಲ್ಲವಾಗಿದೆ' ಎಂದು ಹೆಚ್ಚಿನ ಹುಡುಗಿಯರು ದೃಶ್ಯಮಾಧ್ಯಮದಲ್ಲಿ ತೊಡಗಿಕೊಳ್ಳಲು ಮುಂದಾಗಿರುವ ಕಾರಣವನ್ನು ಅವರು ವಿಶ್ಲೇಷಿಸುತ್ತಾರೆ.

'ಈ ಮುನ್ನ ಹೆಣ್ಣೊಬ್ಬಳು ಸಿನಿಮಾ ಮಾಧ್ಯಮಕ್ಕೆ ಬರಬೇಕೆಂದರೆ ಒಮ್ಮೆಗೇ ಹಲವು ಮೆಟ್ಟಿಲುಗಳನ್ನು ಜಿಗಿಯಬೇಕಿತ್ತು. ಈಗ ಟೀವಿಯಲ್ಲಿನ ಅವಕಾಶಗಳ ಕಾರಣದಿಂದಾಗಿ ಹೆಚ್ಚು ಹೆಣ್ಣುಮಕ್ಕಳಿಗೆ ನಟನೆಯ ಅವಕಾಶಗಳು ದೊರೆಯುತ್ತಿವೆ. ಬೆಳ್ಳಿತೆರೆಗೆ ಕಿರುತೆರೆ ಮೆಟ್ಟಿಲುಗಳ ರೂಪದಲ್ಲಿ ಕೆಲಸ ಮಾಡುತ್ತಿದೆ. ದರ್ಶಿನಿಯಲ್ಲಿ ನಮ್ಮ ಪಕ್ಕದಲ್ಲಿ ನಿಂತು ತಿಂಡಿತಿನ್ನುತ್ತಿರುವ ಹುಡುಗಿಯೊಬ್ಬಳು ಸಿನಿಮಾ ನಟಿ ಆಗಿದ್ದರೂ ಆಗಿರಬಹುದು. ಅಂಥ ಸಂದರ್ಭದಲ್ಲಿ ನಾವಿದ್ದೇವೆ' ಎನ್ನುತ್ತಾರೆ.

ಹೆಣ್ಣುಮಕ್ಕಳ ಅಭಿವ್ಯಕ್ತಿಗೆ ಪೂರಕವಾಗಿರುವ ಟೀವಿ, ಮಹಿಳಾವಿರೋಧಿಯೂ ಹೌದು ಎನ್ನುವುದನ್ನು ವಿಶ್ವನಾಥ್ ಒತ್ತಿಹೇಳುತ್ತಾರೆ. 'ಟೀವಿಯಲ್ಲಿ ಹೆಣ್ಣುಮಕ್ಕಳ ಭಾವಲೋಕ ಅದ್ಭುತವಾಗಿ ಅನಾವರಣಗೊಳ್ಳುವ ಅವಕಾಶವಿದೆ. ಆದರೆ ಆಗಿರುವುದು ತದ್ವಿರುದ್ಧ. ಯಾವುದೇ ವಾಹಿನಿಯ ಎರಡು–ಮೂರು ಧಾರಾವಾಹಿಗಳನ್ನು ಮೂರು ವಾರ ನೋಡಿದರೆ ಸಾಕು, ಹೆಣ್ಣುಮಕ್ಕಳ ಬಗ್ಗೆ ಹೇವರಿಕೆ ಶುರುವಾಗುತ್ತದೆ. ಅಂಥದೊಂದು ನಕಾರಾತ್ಮಕ ದೃಷ್ಟಿಕೋನವನ್ನು ಧಾರಾವಾಹಿಗಳು ಸೃಷ್ಟಿಸಿವೆ' ಎಂದವರು ವಿಷಾದದಿಂದ ಹೇಳುತ್ತಾರೆ.

## ಆರೋಗ್ಯಕರ ಸಿನಿಮಾ!

ಮಹಿಳಾಪ್ರಧಾನ ಸಿನಿಮಾಗಳನ್ನು 'ಹೆಣ್ಣುಮಕ್ಕಳ ಸಿನಿಮಾ' ಅಥವಾ ಸ್ತ್ರೀಪ್ರಧಾನ ಸಿನಿಮಾ ಎಂದು ಸಾಮಾನ್ಯವಾಗಿ ಗುರ್ತಿಸಲಾಗುತ್ತಿದೆ. ಆದರೆ, ನಿಜ ಅರ್ಥದಲ್ಲಿ ಈ ಸಿನಿಮಾಗಳು ಮಾನವೀಯ ಕಥನಗಳೂ ಮನುಷ್ಯ ಸಂಬಂಧಗಳ ಕಥನಗಳೂ ಆಗಿರುತ್ತವೆ ಎನ್ನುವುದನ್ನು ಗಮನಿಸಬೇಕು. ಮೌಲ್ಯಗಳ ಕುರಿತೂ ಈ ಚಿತ್ರಗಳು ಮಾತನಾಡುತ್ತವೆ. ಆ ಕಾರಣದಿಂದಲೇ ಮಹಿಳಾಪ್ರಧಾನ ಸಿನಿಮಾಗಳು ಹೆಚ್ಚು ಅಪೇಕ್ಷಣೀಯ. ಯಾವ ಚಿತ್ರೋದ್ಯಮ ಮಹಿಳಾಪ್ರಧಾನ ಚಿತ್ರಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ರೂಪಿಸುತ್ತದೆಯೋ, ಆ ಭಾಷೆಯ ಚಿತ್ರರಂಗ ಅಷ್ಟರಮಟ್ಟಿಗೆ ಆರೋಗ್ಯಕರವಾಗಿದೆ ಎಂದರ್ಥ. ಈ ನಿಟ್ಟಿನಲ್ಲಿ ಕನ್ನಡ ಚಿತ್ರರಂಗದ ಆರೋಗ್ಯ ಸದ್ಯಕ್ಕೆ ಚೆನ್ನಾಗಿದೆ. ಈ ಸ್ವಾಸ್ಥ್ಯವನ್ನು ಉಳಿಸಿಕೊಳ್ಳುವುದು ಚಿತ್ರರಂಗದ ಕೈಯಲ್ಲೇ ಇದೆ. ■